# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 884

ಉತ್ತರಿಸಬೇಕಾದ ದಿನಾಂಕ : 10.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

| ಕ್ರ.ಸಂ | | ಉತ್ತರಗಳು |
|---|---|---|
| ಅ | ಸುಮಾರು 500 ವರ್ಷಗಳ ಇತಿಹಾಸವಿರುವ ಅಮೃತ್ ಮಹಲ್ ಮತ್ತು ಕಾವಲುಗಳು ಅಭಿವೃದ್ಧಿ ಕಾಣದೇ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು. |
| ಆ | ಹಾಗಿದ್ದಲ್ಲಿ, ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಹಾಗೂ ಬಿಡುಗಡೆಯಾಗಬೇಕಿರುವ ಅನುದಾನವೆಷ್ಟು; ಅನುದಾನ ಬಿಡುಗಡೆಯಲ್ಲಿ ವಿಳಂಬ ಧೋರಣೆ ಎದುರುಸುತ್ತಿರುವುದು ಸರ್ಕಾರಧ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಯಾವ ಕ್ರಮ ತೆಗೆದುಕೊಳ್ಳಲಾಗುವುದು: | ಅಭಿವೃದ್ಧಿ ದೃಷ್ಟಿಯಿಂದ ಕಾವಲುಗಳ ಅಭಿವೃದ್ಧಿಗೆ ಅಗತ್ಯತೆಗನುಗುಣವಾಗಿ ಅನುದಾನ ಬಿಡುಗಡೆ ಮಾಡುತ್ತಿದ್ದು, ಅನುದಾನ ಬಿಡುಗಡೆಯಲ್ಲಿ ಯಾವುದೇ ವಿಳಂಬ ನೀತಿ ಅನುಸರಿಸಿರುವುದಿಲ್ಲ.<br><br>ಕಳೆದ 10 ವರ್ಷಗಳಿಂದ ಇಲಾಖೆಯ ವಿವಿಧ ಯೋಜನೆಗಳಡಿ ರೂ. 4473.12 ಲಕ್ಷಗಳು ಬಿಡುಗಡೆಯಾಗಬೇಕಿದ್ದು, ರೂ.4426.77 ಲಕ್ಷಗಳು ಬಿಡುಗಡೆಯಾಗಿರುತ್ತದೆ. |
| ಇ | ಪಶುಪಾಲನಾ ಇಲಾಖೆಯ ನೂರಾರು ಅಮೃತ್ ಮಹಲ್ ರಾಸುಗಳನ್ನು ಗೋಶಾಲೆಗಳಿಗೆ ಮಠಗಳಿಗೆ ದಾನವಾಗಿ ನೀಡುತ್ತಿದ್ದು, ಇದರಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ : | 12 ವರ್ಷ ವಯಸ್ಸಿಗಿಂತ ಮೇಲ್ಪಟ್ಟ, ತಳಿ ಸಂವರ್ಧನೆ ಮತ್ತು ಉತ್ಪಾದನೆಗೆ ಯೋಗ್ಯವಲ್ಲದ, ತಳಿಯ ಗುಣಲಕ್ಷಣಗಳಿಲ್ಲದ ಅಮೃತ್ ಮಹಲ್ ರಾಸುಗಳನ್ನು "ಜಾನುವಾರುಗಳ ಅನುಪಯುಕ್ತಗೊಳಿಸುವ ಸಮಿತಿ"ಯ ಶಿಫಾರಸ್ಸಿನ ಮೇರೆಗೆ ರಾಸುಗಳನ್ನು ಮುಂದಿನ ಪಾಲನೆ/ ಪೋಷಣೆಗಾಗಿ ಗೋಶಾಲೆಗಳಿಗೆ ಹಾಗೂ ಮಠಗಳಿಗೆ ಉಚಿತವಾಗಿ (ದಾನವಾಗಿ) ನೀಡಲಾಗುತ್ತಿದೆ. ಇದರಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿರುವುದಿಲ್ಲ. |

<table>
<tr><td>ಈ</td><td>ಸುಮಾರು ಸಾವಿರಕ್ಕೆ ಅಧಿಕ ರಾಸುಗಳನ್ನು ಪರಭಾರೆ ಮಾಡುವ ಹುನ್ನಾರ ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು :</td><td>ಅಮೃತ್ ಮಹಲ್ ರಾಸುಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದ್ದು, ಯಾವುದೇ ಪರಭಾರೆ ಹುನ್ನಾರ ನಡೆದಿರುವುದಿಲ್ಲ. ಸದರಿ ಕ್ಷೇತ್ರದಲ್ಲಿ ಪ್ರತಿ ವರ್ಷ ಬಹಿರಂಗ ಹರಾಜಿನ ಮೂಲಕ ಅಸಕ್ತ ರೈತರಿಗೆ ಗಂಡು ರಾಸುಗಳನ್ನು ತಳಿ ಸಂವರ್ಧನೆ, ಕೃಷಿ ಚಟುವಟಿಕೆ ಹಾಗೂ ಅಭಿವೃದ್ಧಿಗೆ ಮಾತ್ರ ನೀಡಲಾಗುತ್ತಿದೆ.</td></tr>
<tr><td>ಉ</td><td>ಅಮೃತ್ ಮಹಲ್ ರಾಸುಗಳು ಹಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದು, ರಾಸುಗಳ ನಿರ್ವಹಣೆಯಲ್ಲಿ ಇಲಾಖೆಯು ವಿಫಲವಾಗಿದ್ದು, ವಯಸ್ಸಾದ ಮತ್ತು ಉಪಯೋಗವಿಲ್ಲದ ರಾಸುಗಳನ್ನು ಮಾತ್ರ ಖಾಸಗಿ ಗೋಶಾಲೆಗಳಿಗೆ ನೀಡಲಾಗಿದೆ ಎಂಬ ಮಾಹಿತಿ ಸರ್ಕಾರಕ್ಕೆ ಇದೆಯೇ : ಹಾಗಿದ್ದಲ್ಲಿ, ಸರ್ಕಾರವು ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು :</td><td>ಅಮೃತ್ ಮಹಲ್ ತಳಿ ಸಂವರ್ಧನಾ ಕ್ಷೇತ್ರವು ತಳಿ ಸಂರಕ್ಷಣೆ ಹಾಗೂ ರೈತರಿಗೆ ಉತ್ತಮವಾದ ಅಮೃತ್ ತಳಿ ಹೋರಿಗಳನ್ನು ನೀಡುವ ಉದ್ದೇಶಕ್ಕಾಗಿ ಸ್ಥಾಪನೆಗೊಂಡಿದ್ದು, ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಹಾಗೂ ಸದರಿ ಕ್ಷೇತ್ರದಲ್ಲಿ ಪ್ರತಿ ವರ್ಷ ಬಹಿರಂಗ ಹರಾಜಿನ ಮೂಲಕ ಅಸಕ್ತ ರೈತರಿಗೆ ಹೆಚ್ಚುವರಿ ಗಂಡು ರಾಸುಗಳನ್ನು ತಳಿ ಸಂವರ್ಧನೆ, ಕೃಷಿ ಚಟುವಟಿಕೆ ಹಾಗೂ ಅಭಿವೃದ್ಧಿಗೆ ಮಾತ್ರ ನೀಡಲಾಗುತ್ತಿದೆ.<br>ವಯಸ್ಸಾದ ಮತ್ತು ಉಪಯೋಗವಿಲ್ಲದ ರಾಸುಗಳನ್ನು ನಿಯಮಾನುಸಾರ ಮಾನ್ಯತೆ ಪಡೆದ ಗೋಶಾಲೆಗಳಿಗೆ ಮಾತ್ರ ನೀಡಲಾಗಿದೆ.</td></tr>
<tr><td>ಊ</td><td>ಕಳೆದ 10 ವರ್ಷದಿಂದ ರಾಸುಗಳ ಸಗಣಿ ಮತ್ತು ಗೊಬ್ಬರವನ್ನು ಹರಾಜು ಮಾಡಲಾಗಿದೆ ಹರಾಜಿನಿಂದ ಬಂದ ಆದಾಯವೆಷ್ಟು: (ಪೂರ್ತಿ) ವಿವರ ನೀಡುವುದು.</td><td>
<table>
<tr><th>ವರ್ಷ</th><th>ಕೇಂದ್ರ ಮತ್ತು ಉಪಕೇಂದ್ರಗಳ ಹೆಸರು</th><th>ಆದಾಯ (ರೂ.ಗಳಲ್ಲಿ)</th></tr>
<tr><td>2012</td><td>ಲಿಂಗದಹಳ್ಳಿ</td><td>4,500.00</td></tr>
<tr><td rowspan="3">2015</td><td>ಬಾಸೂರು</td><td>4,47,900.00</td></tr>
<tr><td>ಲಿಂಗದಹಳ್ಳಿ</td><td>3,17,750.00</td></tr>
<tr><td>ಹಬ್ಬನಘಟ್ಟ</td><td>60,000.00</td></tr>
<tr><td rowspan="4">2016</td><td>ಚಿಕ್ಕ ಎಮ್ಮಿಗನೂರು</td><td>78,000.00</td></tr>
<tr><td>ಲಿಂಗದಹಳ್ಳಿ</td><td>4,500.00</td></tr>
<tr><td>ರಾಮಗಿರಿ</td><td>45,000.00</td></tr>
<tr><td>ಹಬ್ಬನಘಟ್ಟ</td><td>1,0,2000.00</td></tr>
<tr><td rowspan="2">2017</td><td>ಹಬ್ಬನಘಟ್ಟ</td><td>4,10,000.00</td></tr>
<tr><td>ಲಿಂಗದಹಳ್ಳಿ</td><td>4,500.00</td></tr>
</table>
</td></tr>
</table>

| | | | | | |
|---|---|---|---|---|---|
| | | | 2018 | ಲಿಂಗದಹಳ್ಳಿ | 15,000.00 |
| | | | 2019 | ಹಬ್ಬನಘಟ್ಟ | 32,790.00 |
| | | | 2021 | ಲಿಂಗದಹಳ್ಳಿ | 9,00,000.00 |
| | | | | ಒಟ್ಟು | **24,21,940.00** |

| | | ವರ್ಷ | ರಾಸುಗಳ ಉತ್ಪಾದನೆ (ಸಂಖ್ಯೆ) | | | ವಿತರಣೆ (ಸಂಖ್ಯೆ) | ಆಧಾಯ (ರೂ.ಗಳಲ್ಲಿ) |
|---|---|---|---|---|---|---|---|
| ಖ | ಕಳೆದ 10 ವರ್ಷದ ರಾಸುಗಳ ಉತ್ಪಾದನೆ ಮತ್ತು ಅವುಗಳ ವಿತರಣೆ ಮತ್ತು ಅದರಿಂದ ಬಂದ ಆದಾಯವೆಷ್ಟು ? | | ಗಂಡು | ಹೆಣ್ಣು | ಒಟ್ಟು | | |
| | | 2011 | 78 | 85 | 163 | 65 | 20,26,535.00 |
| | | 2012 | 79 | 92 | 171 | 66 | 24,52,020.00 |
| | | 2013 | 89 | 86 | 175 | 71 | 22,52,338.00 |
| | | 2014 | 85 | 87 | 172 | 69 | 27,08,560.00 |
| | | 2015 | 82 | 83 | 165 | 96 | 50,59,050.00 |
| | | 2016 | 132 | 142 | 274 | 113 | 48,20,200.00 |
| | | 2017 | 148 | 142 | 290 | 130 | 43,84,000.00 |
| | | 2018 | 153 | 168 | 321 | 140 | 63,06,600.00 |
| | | 2019 | 205 | 203 | 408 | 190 | 1,05,49,000.00 |
| | | 2020 | 221 | 235 | 456 | 201 | 86,66,500.00 |
| | | ಒಟ್ಟು | **1272** | **1323** | **2595** | **1141** | **4,92,83,803.00** |

**ಪಸಂಮೀ ಇ-73 ಸಲೆವಿ 2021**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು